# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಇಟ್ಟಿಗಿ

ಉಪಸ್ಥಿತರು:-ಶ್ರೀ ಸತ್ಯಪ್ರಸಾದ ರಾವ್ ಎಂ.,
ಉಪತಹಶೀಲ್ದಾರರು, ನಾಡ ಕಛೇರಿ, ಇಟ್ಟಿಗಿ

| ಅರ್ಜಿದಾರರು | ತಕರಾರುದಾರರು |
|---|---|
| 1)ಹೆಚ್.ಎಂ.ನಾಗಯ್ಯ ತಂದೆ ಲೇಟ್ ಹೆಚ್.ಎಂ.ವೀರಯ್ಯ,<br>2)ಹೆಚ್ಎಂ.ಗಂಗಮ್ಮ ಗಂಡ ಹೆಚ್.ಎಂ.ಮಂಜುನಾಥ,<br>ಮುದೇನೂರು ಗ್ರಾಮ, ಹಡಗಲಿ ತಾ. | ಹೆಚ್.ಎಂ.ಸಿದ್ಧಮ್ಮ ಗಂಡ ಚನ್ನವೀರಯ್ಯ,<br>ಮುದೇನೂರು ಗ್ರಾಮ, ಹಡಗಲಿ ತಾ.<br>{ಶ್ರೀ ಎ.ರುದ್ರಜ್ಜ, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮುದೇನೂರು | 219 | 0-68 | ಖುಷ್ಕಿ |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮುದೇನೂರು ಗ್ರಾಮದ ಸ.ನಂ.219 ವಿ:0-68 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಮುದೇನೂರು ಗ್ರಾಮದ ನಿವಾಸಿಯಾದ ಹೆಚ್.ಎಂ.ನಾಗಯ್ಯ ತಂದೆ ಲೇಟ್ ಹೆಚ್.ಎಂ.ವೀರಯ್ಯ ಇವರಿಂದ ಮುದೇನೂರು ಗ್ರಾಮದ ನಿವಾಸಿಯಾದ ಹೆಚ್.ಎಂ.ಗಂಗಮ್ಮ ಗಂಡ ಹೆಚ್.ಎಂ.ಮಂಜುನಾಥ ಇವರು ನೋಂದಾಯಿತ ದಸ್ತಾವೇಜು ಸಂ.3672/2015-16 ದಿ:04-01-2016 ರಂದು ರೂ.48,000/- ಗಳಿಗೆ ಖರೀದಿ ಮಾಡಿರುತ್ತಾರೆ ಎಂದು ಉಪ ನೋಂದಣಾಧಿಕಾರಿಗಳು, ಹೂವಿನಹಡಗಲಿ ರವರ ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ 07-01-2016 ರಂದು ಜಾರಿ ಮಾಡಲಾಗಿ ನಿಗದಿತ ಅವದಿಯೊಳಗೆ ಅಂದರೆ ದಿ:28-01-2016 ರಂದು ಮುದೇನೂರು ಗ್ರಾಮದ ನಿವಾಸಿಯಾದ ಹೆಚ್.ಎಂ.ಸಿದ್ದಮ್ಮ ಗಂಡ ಚನ್ನವೀರಯ್ಯ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ಎಂ.ಆರ್.ನಂ.25/15-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:6-4-2016 ವಿಚಾರಣೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲಾಯಿತು.

ಸದರಿ ಪ್ರಕರಣದ ವಿಚಾರಣೆಗೆ ಅರ್ಜಿದಾರರು ಹಾಜರು. ತಕರಾರುದಾರರು ಗೈರು ಹಾಜರು. ತಕರಾರುದಾರರ ಪರ ವಕೀಲರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಉಮಾದೇವಿ ರವರ ಹೇಳಿಕೆ, ಒಪ್ಪಿಗೆ ಪತ್ರ, ಮರಣ ಪ್ರಮಾಣ ಪತ್ರ, ಕಂಪ್ಯೂಟರ್ ಪಹಣಿ ಪತ್ರಿಕೆಗಳನ್ನು ಸಲ್ಲಿಸಿರುತ್ತಾರೆ. ತಕರಾರುದಾರರ ಮಗನಾದ ಹೆಚ್.ಎಂ.ವೀರಯ್ಯರವರು ಹಾಜರಾಗಿ ಹೆಚ್.ಎಂ.ಉಮಾದೇವಿ ರವರ ಹೇಳಿಕೆ, ಡಯಾಗ್ಲೇಟ್ ಪ್ರತಿ ಸಲ್ಲಿಸಿದರು. ತಕರಾರುದಾರರ ಮಗನು ಹಾಜರಾಗಿ ತನ್ನ ತಾಯಿಯು ಬರೆದುಕೊಟ್ಟ ಲಿಖಿತ ಹೇಳಿಕೆಯನ್ನು ಸಲ್ಲಿಸಿದರು. ಸದರಿ ಪ್ರಕರಣದಲ್ಲಿ ತಕರಾರುದಾರರು ಹಾಜರಾಗಿರುವುದಿಲ್ಲ.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಹಾಲಿ ಪಹಣಿಯು ಹೆಚ್.ಎಂ.ನಾಗಯ್ಯ ತಂದೆ ಲೇಟ್ ಹೆಚ್.ಎಂ.ವೀರಯ್ಯ ಇವರ ಹೆಸರಿಗೆ ನಮೂದು ಇರುತ್ತದೆ. ತಕರಾರುದಾರರು ಸಲ್ಲಿಸಿದ ತಕರಾರು ಅರ್ಜಿಯಲ್ಲಿ ಸದರಿ ಸ.ನಂ.219 ವಿಸ್ತೀರ್ಣ 0-68 ಈ ಪಹಣಿಯು ನನ್ನ ಮಗನ ಹೆಸರಿಗೆ ಋಣಭಾರ ಕಾಲಂ ನಲ್ಲಿ ಆಯ್ಕೆಯಾಗಿದ್ದು, ಈ ಆಯ್ಕೆಯನ್ನು ನಮ್ಮ ಗಮನಕ್ಕೆ ಬರದೆ ಬೇರೆಯವರಿಗೆ ಈ ಪಹಣಿಯನ್ನು ಇಜಿಸ್ಟ್ರರ್ ಆಗಿದ್ದು, ಈ ಪಹಣಿಯನ್ನು ಹಕ್ಕು ಬದಲಾವಣೆಯಾಗದೆ ತಡೆಯಬೇಕೆಂದು ತಿಳಿಸಿರುತ್ತಾರೆ. ತಕರಾರುದಾರರ ಪರ ಅವರ ಮಗನು ಹಾಜರಾಗಿ ತನ್ನ ತಾಯಿಯು ಬರೆದುಕೊಟ್ಟ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಅರ್ಜಿದಾರರು ಸಲ್ಲಿಸಿದ ದಾಖಲಾತಿಗಳು ಸಂಪೂರ್ಣ ಸುಳ್ಳು ಮತ್ತು ಸೃಷ್ಠಿ ಮಾಡಿದಂತಹ ದಾಖಲಾತಿಗಳು ಆಗಿರುತ್ತವೆ. ಸದರಿ ಜಮೀನಿನ ಮಾಲೀಕನಾದ ಹೆಚ್.ಎಂ.ನಾಗಯ್ಯ ತಂದೆ ಲೇಟ್ ಹೆಚ್.ಎಂ.ವೀರಯ್ಯ ಇವರು ತನ್ನ ಮಗನಾದ ಹೆಚ್.ಎಂ.ಕೊಟ್ರಯ್ಯ

ಇವರಿಗೆ ದಿ:8-7-14 ರಂದು ರೂ.45,000/-ಕ್ಕೆ ಕಂಡಿತ ಕ್ರಯಕರಾರು ಮಾಡಿಕೊಂಡಿದ್ದು, ಸದರಿ ಕ್ರಯಕರಾರಿನ ಆಧಾರದ ಮೇಲೆ ಪಹಣಿ ಕಾಲಂ 11 ರಲ್ಲಿ ಸೇರಿಸಿದ್ದು ಇರುತ್ತದೆ. ಸದರಿ ಮೇಲ್ಕಾಣಿಸಿದ ಜಮೀನನ್ನು ತನ್ನ ಮಗನಿಗೆ ಈ ಹಿಂದೆ ಮಾರಾಟ ಮಾಡಿದ್ದನ್ನು ಮುಚ್ಚಿಟ್ಟು, ಕೊಟ್ರಯ್ಯ ಹೆಚ್.ಎಂ. ಇವರು ದಿ:15-9-2015 ರಂದು ಮರಣ ಹೊಂದಿದ ಕಾರಣ ಸದರಿ ಜಮೀನನ್ನು ಹೆಚ್.ಎಂ.ಗಂಗಮ್ಮ ಗಂಡ ಮಂಜುನಾಥ ಇವರಿಗೆ ಮಾರಾಟ ಮಾಡಿದ್ದು ಇರುತ್ತದೆ. ಸದರಿ ಭೂಮಿಯು ಪಹಣಿ ಪತ್ರಿಕೆಯ ಕಾಲಂ 6 ರಲ್ಲಿ `ಸರ್ಕಾರ`ಎಂದು ನಮೂದಾಗಿದ್ದರು ಕೂಡ ಅರ್ಜಿದಾರರು ಮಿಲಾಫಿಯಾಗಿ ಸತ್ಯವನ್ನು ಮರೆಮಾಚಿ ನೋಂದಣಿ ಮಾಡಿಸಿರುತ್ತಾರೆ. ಸದರಿ ಜಮೀನನ್ನು ಸರ್ಕಾರದವರು ಭೂ ರಹಿತರಿಗಾಗಿ ಹೆಚ್.ಎಂ.ವೀರಯ್ಯ ಇವರ ಕುಟುಂಬದವರಿಗೆ ಅನುಕೂಲವಾಗಲೆಂದು ಭೂ ಮಂಜೂರಾತಿಯನ್ನು ಮಂಜೂರು ಮಾಡಿದ್ದು ಇರುತ್ತದೆ. ಅರ್ಜಿದಾರರು ಭೂ ಕಂದಾಯ ಅಧಿನಿಯಮದ ನಿಯಮಗಳಿಗೆ ವಿರುದ್ಧವಾಗಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ಮತ್ತು ಕಂದಾಯ ಇಲಾಖೆಯ ಸಕ್ಷಮ ಅಧಿಕಾರಿಯಿಂದ ಭೂಮಿಯನ್ನು ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ. ಸದರಿ ಅರ್ಜಿದಾರ-1 ರವರು ಮೃತ ಹೆಚ್.ಎಂ.ಕೊಟ್ರಯ್ಯ ಇವರ ವಾರಸುದಾರರಾದ ತಾಯಿ ಮತ್ತು ಹೆಂಡತಿಯಾಗಲಿ, ತಾವು ಖಂಡಿತ ಕ್ರಯಕರಾರನ್ನು ಮಾಡಿ ಪಹಣಿ ಪತ್ರಿಕೆಯ ಕಾಲಂ 11 ರಲ್ಲಿ ಹಕ್ಕನ್ನು ಸೇರಿಸಿ ರೂ.45,000/-ಗಳನ್ನು ತೆಗೆದುಕೊಂಡಿದ್ದರು ಕೂಡ ಸದರಿ ಮೊತ್ತವನ್ನು ಈಗಲೂ ಕೂಡ ತಕರಾರುದಾರರ ಸಂಬಂಧಿಕರಿಗೆ ಮರಳಿ ಕೊಟ್ಟಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದ ಅರ್ಜಿದಾರರು ತಕರಾರುದಾರರಿಗೆ ನಷ್ಟಮಾಡುವ ಉದ್ದೇಶದಿಂದ ಕೆಲವೊಂದು ಕೊಟ್ಟಿ ದಾಖಲೆಗಳನ್ನು ಸೃಷ್ಠಿಸಿ ಈ ರೀತಿಯಾಗಿ ಅರ್ಜಿ ಸಲ್ಲಿಸಿರುತ್ತಾರೆ. ಈ ಮೇಲಿನ ಎಲ್ಲಾ ಕಾರಣಗಳನ್ನು ಸಂಪೂರ್ಣವಾಗಿ ಪರಿಗಣಿಸಿ ಅರ್ಜಿದಾರರು ಮಾಡಿಕೊಟ್ಟ ಖರೀದಿ ಪತ್ರವನ್ನು ರದ್ದುಪಡಿಸಿ, ತಕರಾರುದಾರರಿಗೆ ಸದರಿ ಭೂಮಿಯನ್ನು ಕಾನೂನು ಪ್ರಕಾರ ಮಾನ್ಯ ಸರ್ಕಾರದಿಂದ ಮಾರಾಟ ಮಾಡಲು ಅನುಮತಿಯನ್ನು ತೆಗೆದುಕೊಂಡು ಮೂಲ ಖರೀದಿ ಕರಾರಿನ ಪ್ರಕಾರ ತಕರಾರುದಾರರಿಗೆ ಭೂಮಿಯನ್ನು ನೋಂದಾಯಿತ ಖರೀದಿ ಪತ್ರದ ಪ್ರಕಾರ ಮಾರಾಟ ಮಾಡಲು ಆದೇಶ ಮಾಡಲು ಹಾಗೂ ಸದರಿ ಅರ್ಜಿಯನ್ನು ವಜಾ ಮಾಡಲು ಪ್ರಾರ್ಥಿಸಿರುತ್ತಾರೆ.

ಅರ್ಜಿದಾರರು ವಿಚಾರಣೆ ವೇಳೆ ಸಲ್ಲಿಸಿದ ದಾಖಲೆಗಳಲ್ಲಿ ಹೆಚ್.ಎಂ.ಉಮಾದೇವಿ ಇವರ ಲಿಖಿತ ಪತ್ರ ಮತ್ತು ಒಪ್ಪಿಗೆ ಪತ್ರದ ಪ್ರತಿಯನ್ನು ಸಲ್ಲಿಸಿದ್ದು, ಲಿಖಿತ ಪತ್ರದಲ್ಲಿ ಉಮಾದೇವಿಯವರು ``ತನ್ನ ಗಂಡನು ಸ.ನಂ.219 ವಿ:0-68 ಸೆಂಟ್ಸ ಜಮೀನಿಗೆ ಖಂಡಿತ ಕ್ರಯಕರಾರು ಮಾಡಿಕೊಂಡಿರುತ್ತಾರೆ. ಕಾರಣ ಸದರಿ ಹೆಚ್.ಎಂ.ನಾಗಯ್ಯ ಮತ್ತು ಹೆಚ್.ಎಂ.ಮಹಾಂತಯ್ಯ ಇವರಿಂದ ನನಗೆ ಸದರಿ ಖಂಡಿತ ಕ್ರಯಕರಾರಿನ ಮೊತ್ತ ರೂ.45000-00 ನನಗೆ ತಲುಪಿರುತ್ತದೆ. ಆದ್ದರಿಂದ ಸದರಿ ಖಂಡಿತ ಕ್ರಯಕರಾರು ರದ್ದುಪಡಿಸಲು ಕೋರಿರುತ್ತಾರೆ`` ಎಂದು ತಿಳಿಸಿರುತ್ತಾರೆ. ಮತ್ತು ಒಪ್ಪಿಗೆ ಪತ್ರದಲ್ಲೂ ಉಮಾದೇವಿಯವರು ಇದೇ ಅಂಶದ ಬಗ್ಗೆ ತಿಳಿಸಿದ್ದು, ಸದರಿ ಕ್ರಯ ಕರಾರು ರದ್ದು ಮಾಡಿಸಿಕೊಳ್ಳಲು ತನ್ನ ಆಕ್ಷೇಪಣೆಗಳು ಏನೂ ಇರುವುದಿಲ್ಲ ಎಂದು ಒಪ್ಪಿಗೆ ಪತ್ರದಲ್ಲಿ ತಿಳಿಸಿರುತ್ತಾರೆ. ಕೊಟ್ರಯ್ಯ ಹೆಚ್.ಎಂ. ಇವರು ದಿ:15-9-2015 ರಂದು ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಉಭಯರು ತಿಳಿಸಿರುತ್ತಾರೆ. ಡಯಾಗ್ಲೇಟ್ ಪ್ರಕಾರ ಸದರಿ ಜಮೀನು ಸರ್ಕಾರಿ ಜಮೀನಾಗಿರುತ್ತದೆ. ಅರ್ಜಿದಾರರು ನಮೂನೆ-7ನ್ನು ಸಲ್ಲಿಸಿದ್ದು, ಹೆಚ್.ಎಂ.ವೀರಯ್ಯ ತಂದೆ ಮಲ್ಲಯ್ಯ ಇವರಿಗೆ ಸಾಗುವಳಿ ಚೀಟಿ ಪ್ರಮಾಣ ಪತ್ರ ಸಂಖ್ಯೆ ಡಿ ಆರ್ ನಂ./ಕಂದಾಶಯ/699/ಭೂಮಿ/91-92 ದಿ:2-2-96 ರಂದು ತಹಶೀಲ್ದಾರರು, ಹಡಗಲಿ ರವರು ನೀಡಿರುತ್ತಾರೆ.

ತಕರಾರುದಾರರು ಹೆಚ್.ಎಂ.ಉಮಾದೇವಿ ಯವರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ತನಗೆ ದಿ:5-2-2016 ರಂದು 25,000/- ಗಳನ್ನು ಕೊಟ್ಟು 20 ರೂಪಾಯಿ ಇ-ಸ್ಟಾಂಪಿನಲ್ಲಿ ಖಾಲಿ ಪೇಪರ್ ನಲ್ಲಿ ಸಹಿ ಮಾಡಿಸಿಕೊಂಡು ಹಾಗೆ ದಿನಾಂಕ 29-1-2016 ರಂದು ಬಿಳಿ ಹಾಳೆಯಲ್ಲಿ ಕೂಡ ವಿಷಯವನ್ನು ಬರೆಯದೆ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಉಳಿದ ಹಣವನ್ನು ಬೇರೆಯವರಿಗೆ ಮಾರಾಟ ಮಾಡುವಾಗ ಕೊಡುತ್ತೇವೆ ಎಂದು ಹೇಳಿರುತ್ತಾರೆ. ಉಳಿದ ಹಣವನ್ನು ತನ್ನ ಅತ್ತೆಯವರ ಕೈಯಲ್ಲಾಗಲೀ ಅಥವಾ ನನ್ನ ಕೈಯಲ್ಲಾಗಲೀ ಕೊಡಿಸಬೇಕೆಂದು, ಒಂದು ವೇಳೆ ಹಣವನ್ನು ಕೊಡದಿದ್ದರೆ, ಕೂಡಲೇ ಬೇರೆಯವರ ಹೆಸರಿಗೆ ಆದ ರಿಜಿಸ್ಟ್ರರನ್ನು ರದ್ದುಗೊಳಿಸಿ, ಕಾಲಂ 11 ರಲ್ಲಿ ಆಯ್ಕೆಯನ್ನು ಮುಂದುವರೆಸಲು ಕೇಳಿರುತ್ತಾರೆ.